ಒಂದು ಪಟ್ಟಿಯನ್ನು ತಯಾರು ಮಾಡಿ ಸರಕಾರ ಇಡಬೇಕಾದುದು ಅಗತ್ಯ. ಆದುದರಿಂದ ಈಗಿನಿಂದ ಲಾದರೂ ಸರಕಾರದವರು ಇಂತಹ ಒಂದು ಪಟ್ಟಿಯನ್ನು ಮಾಡಲು ಕ್ರಮ ಕೈಗೊಳ್ಳುತ್ತಾರೆಯೇ?

ಶ್ರೀ ಬಿ. ಎಲ್. ಗೌಡ.—ಈಗಾಗಲೇ ಡೆಪ್ಯೂಟಿ ಕಮಿಷನರ ಕಡೆಯಲ್ಲಿ ಇಂತಹ ವಿವರಗಳಿರುವ ಪಟ್ಟಿಗಳಿವೆ. ಇವನ್ನು ಅವರಿಂದ ತರಿಸಿಕೊಂಡು ಮಾಡಬೇಕಾಗುತ್ತದೆ.

ಶ್ರೀ ಎಂ. ಎಚ್. ಜಯಪ್ರಕಾಶ್ ನಾರಾಯಣ್.—ರಾಜ್ಯಾಂಗದ ಪ್ರಕಾರ ಇಂತಹ ಮೀಸಲು ಸ್ಥಾನಗಳ ಪಟ್ಟಿಯನ್ನು ಮಾಡುವುದು ಸರಕಾರದ ಕರ್ತವ್ಯವಾಗಿದೆ. ಪಂಚಾಯಿತಿಗಳಲ್ಲಿರುವ ಹಾಗೂ ತಾಲ್ಲೂಕು ಬೋರ್ಡುಗಳಲ್ಲಿರುವ ಮೀಸಲು ಸ್ಥಾನಗಳ ಪಟ್ಟಿಯಂತೆ ಚುನಾವಣೆಗಳನ್ನು ಮಾಡುವಾಗ ಸಂಖ್ಯಾ ಬಲದಿಂದ ಮಾಡಬೇಕಾಗಿದೆ. ಇದಕ್ಕನುಕೂಲವಾಗುವಂತೆ ಸರಕಾರ ಇಂತಹ ಪಟ್ಟಿಗಳನ್ನು ತಯಾರಿಸಲು ಪ್ರಯತ್ನ ಮಾಡುತ್ತಾರೆಯೇ?

ಶ್ರೀ ಬಿ. ಎಲ್. ಗೌಡ.—ಸರಕಾರದಲ್ಲಿ ಇಂತಹ ಪಟ್ಟಿ ಮಾಡಿಲ್ಲ. ಎಲ್ಲ ಕಡೆ ಇರುವ ಪಂಚಾಯಿತಿಗಳಲ್ಲಿ ಹಾಗೂ ತಾಲ್ಲೂಕು ಬೋರ್ಡಗಳಲ್ಲಿ ಇಂತಹ ಅಂಕೆ ಅಂಶಗಳು ಇರುವ ಪಟ್ಟಿಗಳಿವೆ. ಇದನ್ನು ಕ್ರೋಡೀಕರಿಸಿ ಪಟ್ಟಿ ತಯಾರು ಮಾಡಬೇಕಾಗಿದೆ.

ಶ್ರೀ ಹೆಚ್. ಬಿ. ಪ್ಯಾಲನಯ್ಯ.—ಇಂತಹ ಷೆಡ್ಯೂಲ್ ಕ್ಯಾಸ್ಟ್ ಹಾಗೂ ಟ್ರೈಬ್ಸ್‌ಗಳ ಪಂಗಡದ ಸಮಿತಿಯ ಸದಸ್ಯರುಗಳ ಹೆಸರನ್ನು ಗೆಜೆಟ್ಟಿನಲ್ಲಿ ಪ್ರಕಟ ಮಾಡುತ್ತಿಲ್ಲವೆ?

ಶ್ರೀ ಬಿ. ಎಲ್. ಗೌಡ.—ಪ್ರಕಟಿಸಲಾಗುತ್ತಿದೆ.

Construction of Bunds in Handadi Village

180. Sri S. JAYAPRAKASH SHETTY (Brahmavar).—

Will the Minister of State for Minor Irrigation be pleased to state:—

(*a*) whether it has come to the notice of Government that hundreds of acres of cultivable land in Dugganakat e of Handadi village, Udipi taluk has submerged due to floods of Seetha river during rainy season;

(*b*) the difficulties in the way of Government in not implementing the request made by the villagers for construction of small bunds, costing about fifty thousand rupees only?

Smt. BASAVARAJESHWARI (Deputy Minister for Social Welfare) [On behalf of SRI A. J. DODDAMETI (Minister of State for Minor Irrigation)].—

(*a*) Yes. About 4 acres of land.

(*b*) It is not possible to avert the said difficulties by constructing small bunds. The matter is being examined by the Mysore Engineering Research Station in solving the difficulties caused to the adjacent lands by floods of Seetha river.

The question of averting the trouble caused to neighbouring lands by the floods of Seetha river is being considered by the Mysore Technical Research Centre.

ಶ್ರೀ ಎಸ್. ಜಯಪ್ರಕಾಶ ಶೆಟ್ಟಿ.- ನಾಲ್ಕು ಎಕರೆ ಭೂಮಿ ಎಂದು ಹೇಳುವುದು ಸತ್ಯಕ್ಕೆ ದೂರವಾದ ಅಂಶವಾಗಿದೆ. ಇದರ ಬಗ್ಗೆ ಸರಕಾರ ಏನು ಹೇಳುತ್ತದೆ?

† ಶ್ರೀಮತಿ ಬನವರಾಜೇಶ್ವರಿ.—ನಮಗೆ ವರದಿ ಬಂದಿರುವ ಪ್ರಕಾರ ಸರ್ವೇ ನಂಬರುಗಳು 5, 12, 19, 3–14, ಇತ್ಯಾದಿ ಭೂಮಿಗಳಲ್ಲಿ ಸುಮಾರು ನಾಲ್ಕು ಎಕರೆಗಳಷ್ಟು ಆಗಿದೆ ಎಂದು ಇದೆ. ಇದರಲ್ಲಿ ಇನ್ನೂ ಹತ್ತಾರು ಎಕರೆಗಳು ಇದೆ ಎಂದು ಹೇಳುತ್ತಿರುವುದರಿಂದ ಇದನ್ನು ಪುನಃ ಪರಿಶೀಲನೆ ಮಾಡುತ್ತೇವೆ.

ಶ್ರೀ ಎಸ್. ಜಯಪ್ರಕಾಶ ಶೆಟ್ಟಿ.—ಒಡ್ಡುಗಳನ್ನು ಮಾಡುವುದರಿಂದ ಸಾಧ್ಯವಿಲ್ಲ ಎಂದು ಇಲ್ಲಿ ಹೇಳಿದೆ. ಆದರೆ ತಾವು ಪರಿಶೀಲನೆ ಮಾಡುತ್ತೇವೆ ಎಂದು ಇಲ್ಲಿ ಹೇಗೆ ಹೇಳುತ್ತೀರಿ ?

ಶ್ರೀಮತಿ ಬನವರಾಜೇಶ್ವರಿ.—ಎನ್.ಇ.ಎಸ್.ಮಾದಲ್ ಸ್ಕೀಂ ಪ್ರಕಾರ ಇದನ್ನು ಪರಿಶೀಲನೆ ಮಾಡಿ ಇದಕ್ಕೆ ಖಾಯಂ ಆದ ಪರಿಹಾರವನ್ನು ಕಂಡು ಹಿಡಿಯಬೇಕೆಂದು ಇದನ್ನು ಎಂ.ಇ.ಆರ್.ಎಸ್. ಕಮಿಟಿಗೆ ರೆಫರ್ ಮಾಡಲಾಯಿತು. ಅವರು ಡೀಟೇರ್ಸ್‌ಗಳನ್ನು ಕಳುಹಿಸಿದ ನಂತರ ಬೇಕಾದರೆ ಇದರ ಅಸಿಸ್ಟೆಂಟು ಇಂಜಿನೀಯರವರ ಕಡೆಗೆ ಕಳುಹಿಸಿ ಅವರಿಂದ ವರದಿ ತರಿಸ ಬೇಕಾಗಿದೆ. ಅವರು ಯಾವುದಾದರೂ ಖಾಯಂ ಆದ ಪರಿಹಾರ ಕ್ರಮವನ್ನು ಮಾಡಬೇಕೆಂದು ಹೇಳಿದರೆ ಅದನ್ನು ಸರಕಾರ ವಿಚಾರ ಮಾಡಲಾಗುತ್ತದೆ.

ಶ್ರೀ ಬಿ. ಎಂ. ಇದಿನಬ್ಬ.—ಇದು ಒಂದು ಸಣ್ಣ ನೀರಾವರಿ ಯೋಜನೆ. ನಮ್ಮ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಬೇರೆ ಯಾವ ಯೋಜನೆಯೂ ಇಲ್ಲ. ಇದಕ್ಕಾಗಿ ಸರಕಾರ ಐವತ್ತು ಸಾವಿರ ಖರ್ಚು ಮಾಡಿ ಶೀಘ್ರವಾಗಿ ಇದರ ಕಾರ್ಯಕ್ರಮ ಮಾಡಲು ಪ್ರಯತ್ನ ಮಾಡುತ್ತಾರೆಯೇ ?

ಶ್ರೀಮತಿ ಬನವರಾಜೇಶ್ವರಿ.—ಎನ್.ಇ.ಎಸ್. ಕಮಿಟಿಯಿಂದ ವರದಿ ಬೇಗ ಬಂದರೆ ಇದರ ಬಗ್ಗೆ ಸೂಕ್ತ ಕಾರ್ಯಕ್ರಮ ತೆಗೆದುಕೊಳ್ಳಲು ಪ್ರಯತ್ನ ಮಾಡಬಹುದು. ಇದು ಬಂದ ತಕ್ಷಣ ಕಾರ್ಯಕ್ರಮ ತೆಗೆದುಕೊಳ್ಳುತ್ತೇವೆ.

Selection of Probationers by the P.S.C.

211. Sri SIDDAIAH KASHIMATH (Shirahatti).—

Will the Chief Minister be pleased to state :—

(*a*) the number of I and II grade probationers who have been selected by the Public Service Commission during the year 1969–70, up to a latest convenient date ;

(*b*) why the orders of appointment of II Grade officers have not been issued so far by the Government ;

(*c*) the reasons for the delay ?

Sri VEERENDRA PATIL (Chief Minister).—

(*a*) Under the Gazetted Probationers Recruitment Rules, 1966, in all 129 candidates have been selected ; out of these 26 candidates have been selected for Class I Posts and the remaining for Class II Posts.

(*b*) and (*c*) Since some of the candidates selected for Class I posts were included for appointment to Class II posts also, assignment to various services under Class II was required to be deferred till the candidates appointed to Class I Posts reported for duty. Appointment orders will be issued as soon as preliminaries such as Medical Examination, verification of antecedent are completed.